ಸಿ.ಸಿ. ಸಂಃ 646/2019 ಪಿ.ಡಬ್ಲ್ಯು: 02

ದಿನಾಂಕಃ 20-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಬಿ.ಎನ್.ಎನ್ ಆರೋಪಿ ಪರ ವಕೀಲರಿಂದಃ

ನಮ್ಮ ಯೂನಿಟ್ ಮ್ಯಾನೇಜರ್ ಹಾಗೂ ಏರಿಯಾ ಕ್ರೆಡಿಟ್ ಮ್ಯಾನೇಜರ್ ಅನ್ನು ದಿನಾಂಕ 19-11-2018 ರಂದು ಕರೆಸಿಕೊಂಡೆವು. ರೂ. 29,00,950/- ಗಳನ್ನು ದೊಡ್ಡಬಳ್ಳಾಪುರಕ್ಕೆ ದಿನಾಂಕ 19-11-2018 ರಂದು ತೆಗೆದುಕೊಂಡು ಹೋದರು. ಸದರಿ ಮೊತ್ತವನ್ನು ಹೊರತುಪಡಿಸಿ ಉಳಿಕೆ ಮೊತ್ತ ರೂ. 8,61,500/-ಗಳು ಇತ್ತು. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಮತ್ತು ರೋಹಿತ್ ರವರು ಹೋಗಿ ಡೆಪಾಜಿಟ್ ಮಾಡಿರುತ್ತೇವೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಕಂಪನಿಯಲ್ಲಿ ನಾನು ಬ್ರ್ಯಾಂಚ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಬ್ರ್ಯಾಂಚ್ ನ ಲೋನ್ ಸಂಬಂಧ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತ್ತೇನೆ. ಸಾಕ್ಷಿಯು ಮುಂದುವರೆದು ಲೋನ್ ವ್ಯವಹಾರದೊಂದಿಗೆ ನನಗೆ ಫೀಲ್ಡ್ ವರ್ಕ್ ಸಹ ಇರುತ್ತದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಕಲೆಕ್ಷನ್/ಸಂಗ್ರಹಣೆ ಆದ ಹಣವನ್ನು ನಮ್ಮ ಬ್ರ್ಯಾಂಚ್ ಗೆ ತೆಗೆದುಕೊಂಡು ಬರುತ್ತಾರೆ ಎಂದರೆ ಸರಿ. ನಿಮ್ಮ ಬ್ರ್ಯಾಂಚ್ ನಲ್ಲಿ ಲಾಗ್ ಬುಕ್ ಇಟ್ಟುಕೊಂಡಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಕ್ಯಾಶ್ ಬುಕ್ ಅನ್ನು ಇಟ್ಟುಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಕ್ಯಾಶ್ ಬುಕ್ ನಲ್ಲಿ ಸಂಗ್ರಹಣೆಯಾದ ಮೊತ್ತ ಹಾಗೂ ಖರ್ಚುಗಳ ವಿವರಗಳನ್ನು ಬರೆದಿರುತ್ತೇವೆ. ಸದರಿ ಕ್ಯಾಶ್ ಬುಕ್ ಅನ್ನು ಆರೋಪಿಯೇ ಎಂಟ್ರಿ ಮಾಡುತ್ತಿದ್ದರು. ಯಾರೇ ಹಣವನ್ನು ಕಲೆಕ್ಷನ್ ಮಾಡಿಕೊಂಡು ಬಂದರೂ ಅದರ ವಿವರಗಳನ್ನು ಆರೋಪಿಯೇ ಕ್ಯಾಶ್ ಬುಕ್ ನಲ್ಲಿ ಎಂಟ್ರಿ ಮಾಡುತ್ತಿದ್ದರು.

ನಮ್ಮ ದೂರಿನಲ್ಲಿ ಹೇಳಿರುವಂತೆ ಆರೋಪಿಯು ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ವಿಚಾರ ದಿನಾಂಕ 19-11-2018 ರಂದು ನನಗೆ ತಿಳಿಯಿತು. ಸಾಮಾನ್ಯವಾಗಿ ನಮ್ಮ ಸ್ಟಾಫ್ ರವರು ಹಣವನ್ನು ಕಲೆಕ್ಷನ್ ಮಾಡಿಕೊಂಡು ಮಧ್ಯಾಹ್ನ 01.00 ಗಂಟೆ ಅಥವಾ 02.00 ಗಂಟೆಗೆ ಬರುತ್ತಾರೆ. ಸಾಮಾನ್ಯವಾಗಿ ನಮ್ಮ ಬ್ರ್ಯಾಂಚ್ ನಿಂದ ಹಣವನ್ನು ಬ್ಯಾಂಕಿಗೆ ಡೆಪಾಜಿಟ್ ಮಾಡಲು ಒಬ್ಬರನ್ನೇ ಕಳುಹಿಸುತ್ತಿರಲಿಲ್ಲ, ಇಬ್ಬರನ್ನು ಕಳುಹಿಸುತ್ತಿದ್ದೆವು. ಬ್ಯಾಂಕಿಗೆ ಹಣವನ್ನು ಡೆಪಾಜಿಟ್ ಮಾಡಲು ಯಾರಾದರೂ ಹೋಗಬಹುದು. ಬ್ಯಾಂಕ್ ಗೆ ಡೆಪಾಜಿಟ್ ಮಾಡಲು ಹೋಗುವವರು ನಮ್ಮ ಬ್ರ್ಯಾಂಚ್ ನ ಸ್ಟಾಫ್ ಆಗಿರುತ್ತಾರೆ ಎಂದರೆ ಸರಿ. ಹಣವನ್ನು ಆರೋಪಿಯು ದುರುಪಯೋಗಪಡಿಸಿಕೊಂಡರು ಎಂದು ಹೇಳುವ ದಿನದಂದು ಹಣವನ್ನು ಬ್ಯಾಂಕ್ ಗೆ ಡೆಪಾಜಿಟ್ ಮಾಡಲು ಆರೋಪಿಯೊಂದಿಗೆ ಯಾರು ಹೋದರು ಎಂಬುದು ನನಗೆ ಗೊತ್ತಿಲ್ಲ. ಘಟನೆ ನಡೆದಿದೆ ಎಂಬ ದಿನದಂದು ಆರೋಪಿಯು ನಮ್ಮ

ಬ್ರ್ಯಾಂಚ್ ನಿಂದ ರೂ. 2,16,500/-ಗಳನ್ನು ಮಾತ್ರ ತೆಗೆದುಕೊಂಡು ಹೋದರು ವಿನಹಃ ರೂ. 8,61,500/- ಅಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಬ್ಯಾಂಕ್ ಗೆ ಹಣವನ್ನು ಡೆಪಾಜಿಟ್ ಮಾಡಿದ್ದಾರೆಯೋ ಇಲ್ಲಕಿವ್ರೋ ಎಂಬ ವಿಚಾರವನ್ನು ಹಣ ಕಳುಹಿಸಿಕೊಟ್ಟ 2 ವಾರಗಳ ನಂತರ ವೆರಿಫೈ ಮಾಡುತ್ತೇವೆ. ಯಾರಾದರೂ ಹಣವನ್ನು ಡೆಪಾಜಿಟ್ ಮಾಡಲು ಬ್ಯಾಂಕ್ ಗೆ ತೆಗೆದುಕೊಂಡು ಹೋಗುವ ಮುನ್ನ ಅವರಿಂದ ಹಿಂಬರಹ ಅಥವಾ ಸಹಿಯನ್ನು ಪಡೆಯುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಹಣವನ್ನು ತೆಗೆದುಕೊಂಡು ಹೋಗುವ ಮುನ್ನ ಹಿಂಬರಹ ಅಥವಾ ಸಹಿಯನ್ನು ಪಡೆಯುವುದಿಲ್ಲ ಆದರೆ ಡೆಪಾಜಿಟ್ ಮಾಡಿ ಬಂದ ನಂತರ ಬ್ಯಾಂಕ್ withdrawl/deposit register ರಲ್ಲಿ ಎಂಟ್ರಿ ಆಗುತ್ತದೆ ಎಂದು ನುಡಿಯುತ್ತಾರೆ.

ಆರೋಪಿಯು ಬರೆದು ಬ್ಯಾಂಕಿಗೆ ನೀಡಿದರು ಎಂದು ಹೇಳುವ ಚಲನ್ ನ ಅಸಲಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಅಥವಾ ಪೊಲೀಸರಿಗೆ ನೀಡಲು ತೊಂದರೆ ಇತೆ? ಎಂಬ ಪ್ರಶ್ನೆಗೆ ಸಾಕ್ಷಿ ಅಸಲು ಪ್ರತಿ ಹಾಗೂ ನಕಲು ಪ್ರತಿ ಎರಡನ್ನೂ ಸಹ ನೀಡಿದ್ದೇವೆ ಎಂದು ನುಡಿಯುತ್ತಾರೆ. ನೀವು ಹಾಜರುಪಡಿಸಿರುವ ಚಲನ್ ನಿಪಿ-17 ಆಗಿರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನಿಪಿ-17 ನ್ನು ನೋಡಿ ಅದು ಅಲ್ಲ, ನಾವು ಅಸಲಿ ಪ್ರತಿಯನ್ನೇ ಪೊಲೀಸರಿಗೆ ನೀಡಿದ್ದೇವೆ ಎಂದು ನುಡಿಯುತ್ತಾರೆ. ಆ್ಸರೋಪಿಯು ಆಫೀಸ್ ನಿಂದ ಹಣವನ್ನು ತೆಗೆದುಕೊಂಡು ಡೆಪಾಜಿಟ್ ಮಾಡಲು ಹೋದರು ಎಂಬ ಸಮಯದಲ್ಲಿ ನಾನು ಬ್ರ್ಯಾಂಚ್ ನಲ್ಲಿ ಇರಲಿಲ್ಲ, ಫೀಲ್ಡ್ ನಲ್ಲಿ ಇದ್ದೆನು. ನಿಪಿ-11 ರ ದಾಖಲೆಯು ನಮ್ಮ ಕಂಪನಿಯಲ್ಲಿ ಜನರೇಟ್ ಮಾಡಿರತಕ್ಕಂತಹ ದಾಖಲೆಯಾಗಿರುತ್ತದೆ ಎಂದರೆ ಸರಿ. ನಿಪಿ-11 ರ ದಾಖಲೆಯನ್ನು ಆರೋಪಿಯೇ ಜನರೇಟ್ ಮಾಡಿರುತ್ತಾರೆ. ನಿಪಿ-14, 14 ಎ ಮತ್ತು 14 ಬಿ ರ ದಾಖಲೆಗಳನ್ನೂ ಸಹ ನಿಮ್ಮ ಕಛೇರಿಯಲ್ಲಿಯೇ ಜನರೇಟ್ ಮಾಡಲಾಗಿರುತ್ತದೆ ಎಂದರೆ ಸಾಕ್ಷಿ ನಿಪಿ-14, 14 ಎ ಮತ್ತು 14 ಬಿ ರ ದಾಖಲೆಗಳು ಆಡಿಟ್ ರಿಪೋರ್ಟ ಆಗಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯು ಆ ದಿನ ಎಷ್ಟು ಹಣವನ್ನು ತೆಗೆದುಕೊಂಡು ಹೋದರು ಎಂಬ ವಿಚಾರ ನಿಮಗೆ ಯಾರು ತಿಳಿಸಿದರು ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ವಿಚಾರ ಟ್ಯಾಲಿ ಮಾಡಿದಾಗ ನನಗೆ ತಿಳಿಯಿತು, ಸದರಿ ವಿಚಾರವನ್ನು ನನಗೆ ಯಾರೂ ತಿಳಿಸದ ಕಾರಣ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಹಣವನ್ನು ತೆಗೆದುಕೊಂಡು ಹೋದದ್ದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆ ದಿನ ನಾನು ಫೀಲ್ಡ್ ವರ್ಕ್ ನಲ್ಲಿ ಇದ್ದೆನು ಎಂದು ನುಡಿಯುತ್ತಾರೆ. ಸದರಿ ವಿಚಾರಗಳು ನಮ್ಮ ಗಮನಕ್ಕೆ ಬಂದ ದಿನದಿಂದ ಸುಮಾರು 15-20 ದಿನಗಳ ನಂತರ ಎಂದರೆ ಆಡಿಟ್ ರಿಪೋರ್ಟ್ ಪಡೆದುಕೊಂಡು ಬ್ಯಾಂಕ್ ವೆರಿಫಿಕೇಶನ್ ಮಾಡಿದ ನಂತರ ಪೊಲೀಸರಿಗೆ ದೂರನ್ನು ನೀಡಿದೆವು.

ನಮ್ಮ ಬ್ರ್ಯಾಂಚ್ ನಿಂದ ಹಣವನ್ನು ತೆಗೆದುಕೊಂಡು ಹೋಗುವ ಮುನ್ನ ನೋಟುಗಳ ಮುಖ ಬೆಲೆಗಳನ್ನು/Denomination ಗಳನ್ನು ಬರೆದುಕೊಳ್ಳುವುದಿಲ್ಲ. ಘಟನೆ ನಡೆದಿದೆ ಎಂಬ ದಿನದಂದು ನಾನು ನನ್ನ ಬ್ರ್ಯಾಂಚ್ ಗೆ ಸಂಜೆ 7.30 ಗಂಟೆಗೆ ಬಂದೆನು. ನಾನು ಬ್ರ್ಯಾಂಚ್ ಗೆ ಬಂದ ಸಮಯದಲ್ಲಿ ಆರೋಪಿಯು ಬ್ರ್ಯಾಂಚ್ ನಲ್ಲಿ ಇದ್ದರು. ನಾನು ಬ್ರ್ಯಾಂಚ್ ಗೆ ಹೋದಾಗ ಆರೋಪಿಯು ಹಣವನ್ನು ಡೆಪಾಜಿಟ್ ಮಾಡಲು ಹೋಗಿ ಬಂದರೋ ಇಲ್ಲವೋ ಎಂಬ ವಿಚಾರ ನನಗೆ ತಿಳಿಯಿತು. ಸಾಮಾನ್ಯವಾಗಿ ಹಣವನ್ನು ಡೆಪಾಜಿಟ್ ಮಾಡಲು ಹೋಗಿ ಬಂದಾಗ ಬ್ಯಾಂಕ್ ಚಲನ್ ಅನ್ನು ಬ್ರ್ಯಾಂಚ್ ಗೆ ಸಲ್ಲಿಸಬೇಕಾಗುತ್ತದೆ ಎಂದರೆ ಸರಿ. ನಿಪಿ-17 ರ ದಾಖಲೆಯಲ್ಲಿ ಯಾವುದೇ ತಿದ್ದುಪಡಿಗಳು ಇರುವುದಿಲ್ಲ ಎಂದರೆ ಸಾಕ್ಷಿ ನಿಪಿ-17 ನ್ನು ನೋಡಿ ಸರಿ ಎಂದು ನುಡಿಯುತ್ತಾರೆ. ಆ ದಿನ ಬ್ಯಾಂಕ್ ಗೆ ಡೆಪಾಜಿಟ್ ಮಾಡಲು ಆರೋಪಿಗೆ ರೂ. 2,16,500/-ಗಳನ್ನು ಮಾತ್ರ ನೀಡಿದ್ದು ಅವರು ಅಷ್ಟೂ ಹಣವನ್ನು ಬ್ಯಾಂಕ್ ಗೆ ಡೆಪಾಜಿಟ್ ಮಾಡಿ ಬಂದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ತನ್ನ ಕರ್ತವ್ಯವನ್ನು ಸರಿಯಾಗಿ ನಿಭಾಯಿಸಿದ್ದರೂ ಸಹ ನಾವೆಲ್ಲರೂ ಸೇರಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ಸೃಷ್ಠಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ದಿನಾಂಕ 06-12-2018 ರಂದು ನಮ್ಮ ಬ್ರ್ಯಾಂಚ್ ನಿಂದ ವರ್ಗಾವಣೆಯಾದರು.

**(**ಮರುವಿಚಾರಣೆ ಇರುವುದಿಲ್ಲ**.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು